# ಸಭೆಯ ನಡಾವಳಿಗಳು

ದಿನಾಂಕ: 20-03-2021 ರ ಸಮಯ 11-00 ಗಂಟೆ ಪೂರ್ವಾಹ್ನದಂದು ವಾರ್ಡ್ ಸಂಖ್ಯೆ 195 ರ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಗಿರುವ ಸಭೆಯ ನಡಾವಳಿಗಳು

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮತ್ತು ಸದಸ್ಯರುಗಳ ವಿವರಗಳು**

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ ಕೆ.ವಿ.ಶಶಿಕುಮಾರ್ | ನೋಡಲ್ ಅಧಿಕಾರಿ/ಕಾರ್ಯಪಾಲಕ ಅಭಿಯಂತರರು |
| 2 | ಶ್ರೀ ರಂಗಸ್ವಾಮಿ ಸ.ಕಂ.ಅ | ಸದಸ್ಯ ಕಾರ್ಯದರ್ಶಿ/ಸಹಾಯಕ ಕಂದಾಯ ಅಧಿಕಾರಿ |
| 3 | ಶ್ರೀ ಮಹೇಶ್.ಜಿ.ಆರ್. | ಅರಣ್ಯ ವೀಕ್ಷಕರು |
| | ಶ್ರೀಮತಿ ಶೋಭಾ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ.ಮೋಹನ್.ಎನ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ ಮಾರುತಿ ಕೆ.ಎನ್ | ಸಹಾಯಕ ಇಂಜಿನಿಯರ್, ವಾರ್ಡ್ ನಂ.195 |
| 6 | ಶ್ರೀ ಎಸ್ ಆರ್ ನಾಗರಾಜ್ | ಸಹಾಯಕ ಅಭಿಯಂತರರು BWSSB (ಎಸ್-2) |
| 7 | ಶ್ರೀ ಕಿರಣ್ | ಕಿರಿಯ ಅಭಿಯಂತರರು BESCOM (ಎಸ್-6) |
| 8 | ಶ್ರೀ.ಜಿ.ವಿ.ಹೆಬ್ಬಾರ್ | ಸದಸ್ಯರು |
| 9 | ಶ್ರೀ.ಆನಂತ ಪದ್ಮನಾಬ | ಸದಸ್ಯರು |
| 10 | ಶ್ರೀ.ಸದಾಶಿವ | ಸದಸ್ಯರು |
| 11 | ಶ್ರೀ.ನೀರಜ್ ಕುಮಾರ್ | ಸದಸ್ಯರು |
| 12 | ಶ್ರೀ.ಕೆಂಪರಾಜು | ಸದಸ್ಯರು |
| 13 | ಶ್ರೀ.ಪ್ರಕಾಶ್ | ಸದಸ್ಯರು |

**ವಾರ್ಡ್ ಸಮಿತಿಯ ಉದ್ದೇಶ ಮತ್ತು ಸಭೆಯ ಮಹತ್ವವನ್ನು ತಿಳಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಯಿತು.**

1. ಹಿಂದಿನ ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಸಭೆಯಲ್ಲಿ ಓದಲಾಯಿತು.
2. ಇಂದಿನ ಸಭೆಯಲ್ಲಿ ಮಾನ್ಯ ಅಧ್ಯಕ್ಷರ ಸಮ್ಮುಖದಲ್ಲಿ ಚರ್ಚಿಸಿದ ವಿಷಯಗಳು

| ಕ್ರಮ ಸಂಖ್ಯೆ | ವಿಷಯಗಳು | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 1 | ವಾರ್ಡಿನ ವ್ಯಾಪ್ತಿಯಲ್ಲಿ ಆರ್‌ಬಿಐ ಬಡಾವಣೆಯಲ್ಲಿ ಬೇರೆ ಬಡಾವಣೆಗಳಿಂದ ಕಸ ತಂದು ಹಾಕುತ್ತಿರುವ ಬಗ್ಗೆ ಶ್ರೀ.ಜಿ.ವಿ.ಹೆಬ್ಬಾರ್ ರವರು ಪ್ರಸ್ತಾಪಿಸಿದರು | ಮಾರ್ಷಲ್‌ಗಳನ್ನು ನೇಮಿಸಿ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು, (ಘನತ್ಯಾಜ್ಯ) |
| 2 | ಅಂಗಡಿ ಮುಂಗಟ್ಟುಗಳ ಮಾಲೀಕರು ಮತ್ತು ತಳ್ಳುಗಾಡಿಗಳ ಮಾರಾಟಗಾರರು ಕಸವನ್ನು ತಂದು ಆರ್‌ಬಿಐ ಬಡಾವಣೆಯಲ್ಲಿ ಸುರಿಯುತ್ತಿರುವ ಬಗ್ಗೆ ಚರ್ಚಿಸಲಾಯಿತು | ಅಂಗಡಿ ಮಾಲೀಕರು ಮತ್ತು ತಳ್ಳುಗಾಡಿಗಳ ಮಾರಾಟಗಾರರಿಗೆ ಕಸ ವಿಂಗಡನೆ ಮಾಡಲು ತಿಳುವಳಿಕೆ ನೀಡಲು ಸೂಚಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು, (ಘನತ್ಯಾಜ್ಯ) |

Scanned with CamScanner

| ಕ್ರಮ ಸಂಖ್ಯೆ | ವಿಷಯಗಳು | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 3 | ವಾರ್ಡ್ ವ್ಯಾಪ್ತಿಯಲ್ಲಿ ಇರುವ ಖಾಲಿನಿವೇಶನಗಳನ್ನು ಸ್ವಚಗೊಳಿಸುವ ಬಗ್ಗೆ ಚರ್ಚಿಸಲಾಯಿತು | ಸದರಿ ವಿಷಯದ ಬಗ್ಗೆ ಸಹಾಯಕ ಕಂದಾಯ ಅಧಿಕಾರಿಗಳಿಗೆ ಖಾಲಿ ನಿವೇಶನದ ಮಾಲೀಕರಿಗೆ ಸ್ವಚ್ಛಗೊಳಿಸುವಂತೆ ತಿಳುವಳಿಕೆ ಪತ್ರ ನೀಡುವಂತೆ ಸೂಚಿಸಲಾಯಿತು | ಸಹಾಯಕ ಕಂದಾಯ ಅಧಿಕಾರಿ (ಯಲಚೇನಹಳ್ಳಿ ಉಪವಿಭಾಗ) |
| 4 | ಸ್ಟ್ರೀಟ್ ಲೈಟ್‌ಗಳ ಆಟೋಮೆಟಿಕ್ ನಿಯಂತ್ರಣಕ್ಕೆ ಕ್ರಮವಹಿಸುವ ಬಗ್ಗೆ ಚರ್ಚಿಸಲಾಯಿತು | ವಾರ್ಡ್ ವ್ಯಾಪ್ತಿಯಲ್ಲಿ ಬರುವ ಸ್ಟ್ರೀಟ್ ಲೈಟ್‌ಗಳ ಆಟೋಮೆಟಿಕ್ ನಿಯಂತ್ರಣಕ್ಕೆ ಕ್ರಮವಹಿಸಲು ಎಲೆಕ್ಟ್ರಿಕಲ್ ಇಂಜನಿಯರ್ ಸೂಚಿಸಲಾಯಿತು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ-ಎಸ್12) |
| 5 | ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲಾಯಿತು | ವಾರ್ಡ್ ವ್ಯಾಪ್ತಿಯಲ್ಲಿ ಪ್ರಸ್ತುತ ನಡೆಯುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತವಾಗಿ ಮುಕ್ತಾಯಗೊಳಿಸಲು ಸಂಬಂಧಪಟ್ಟ ಗುತ್ತಿಗೆದಾರರಿಗೆ ಸೂಚಿಸಲು ವಾರ್ಡ್ ಅಭಿಯಂತರರಿಗೆ ತಿಳಿಸಲಾಯಿತು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಅಂಜನಾಪುರ ಉಪ ವಿಭಾಗ) |
| 6 | ವಾರ್ಡ್ ಕಛೇರಿ ಮುಂಭಾಗದ ಉದ್ಯಾನವನದಲ್ಲಿ ಮರಗಳ ರೆಂಬೆಗಳು ಮನೆಯ ಕಿಟಕಿಯ ಪಕ್ಕದಲ್ಲಿ ಬೆಳೆದು ಸೊಳ್ಳೆಗಳು ಹೆಚ್ಚಾಗಿರುವ ಬಗ್ಗೆ ಚರ್ಚಿಸಲಾಯಿತು | ವಾರ್ಡ್ ಕಛೇರಿ ಮುಂಭಾಗದ ಉದ್ಯಾನವನದ ಮರಗಳ ರೆಂಬೆಗಳು ಮನೆಯ ಕಿಟಕಿಯ ಮೇಲೆ ಬಾಗಿರುವ ರೆಂಬೆಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು. | ತೋಟಗಾರಿಕೆ ಅಧೀಕ್ಷಕರು (ಬೊಮ್ಮನಹಳ್ಳಿ ವಲಯ) |

ಮೇಲ್ಕಂಡ ಎಲ್ಲಾ ವಿಷಯಗಳೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

-ಸಹಿ-
ನೋಡೆಲ್ ಅಧಿಕಾರಿ
ವಾರ್ಡ್-195 ಬೃ.ಬೆಂ.ಮ.ಪಾಲಿಕೆ

Scanned with CamScanner